

ಚುರುಕಾಗಿದ್ದು ಸೂಕ್ಷ್ಮ ಮನಸುಳ್ಳ, ಹಾಸಿಗೆ ಹಿಡಿದ ಹಿರಿಯರನ್ನು ನೋಡಿಕೊಳ್ಳುವುದು ಮಹಾ ಕಷ್ಟ. ಸುಜಾತಳಿಗಂತೂ ಗುಡ್ಡವೇ ತಲೆಯ ಮೇಲೆ ಬಿದ್ದಷ್ಟು... ತೊಂದರೆಯಾಗಿತ್ತು. ಇಷ್ಟು ದಿನ ಆರಾಮವಾಗಿ ಓಡಾಡಿಕೊಂಡಿದ್ದವರ ಮೇಲೆ ಸಂಸಾರದ ನೊಗ ಕಳಚಿ ಬಿದ್ದಿತ್ತು. ಇಬ್ಬರೂ ಅನನುಭವಿ ಎತ್ತುಗಳೇ. ಹೊರಲಾಗದೇ ಒದ್ದಾಡಿದೆವು. ಸಾಲದ್ದಕ್ಕೆ ಸಾಲದ ಬಾಧೆ ಬೇರೆ. ಅಪ್ಪನ ಕರ್ಮಾಂತರದ ಖರ್ಚನ್ನೆಲ್ಲಾ ಅಣ್ಣತಮ್ಮ ಸೇರಿಯೇ ಮಾಡಿದ್ದರೂ ನನಗೇ ಖರ್ಚು ಹೆಚ್ಚಾಯಿತು. ಅವ್ವನ ಟ್ರೀಟ್‌ಮೆಂಟು ಇತ್ಯಾದಿಗಳೆಲ್ಲ ಸೇರಿ... ಇನ್ನಷ್ಟು ಸಾಲ ಹೆಗಲೇರಿತು. ಅಪ್ಪ ಹೋದಾಗಿನಿಂದ ನನ್ನ ಕೆಲಸವೂ ತೀರ ಕಡಿಮೆಯಾಗಿತ್ತು. ಕೆಲಸಗಾರರನ್ನು ಬಿಡುವ ಹಾಗಿಲ್ಲ. ಮತ್ತೆ ಬೇಕೆಂದರೆ ದೊರೆಯುವದಿಲ್ಲ. ಅದಕ್ಕೆ ಇಟ್ಟುಕೊಂಡು ಪುಕ್ಕಟೆ ಸಂಬಳ ಕೊಡುತ್ತಿದ್ದೆ. ಇನ್ನು ಮಕ್ಕಳು ಪ್ರತಿಷ್ಠಿತ ಶಾಲೆಗೇ ಹೋಗಬೇಕು ಎನ್ನುವದು ಸುಜಾತಳ ಬಯಕೆ. ಮಕ್ಕಳ ಭವಿಷ್ಯದ ಪ್ರಶ್ನೆ. ಇಲ್ಲವೆನ್ನಲಾದೀತೆ? ಅದಕ್ಕೆ ಸ್ಕೂಲ್ ವ್ಯಾನ್... ಇತ್ಯಾದಿಗಳು. ಸರಿ, ಸೇರಿಸಿದ್ದಾಯಿತು. ಇನ್ನು ಅವಳ ಸೀರೆ, ಒಡವೆಗಳು, ಕಿಟ್ಟಿ ಪಾರ್ಟಿಗಳು... "ನಿಮ್ಮ ಬಿಸಿನೆಸ್‌ನ್ಯಾಗ ಹೆಚ್ಚು ಕಡಿಮಿ ನಡದ ಇರ್ತದ. ಅದಕ್ಕ ನಮಗ್ಯಾಕ ತ್ರಾಸು ಕೊಡ್ತೀರಿ?..." ಎಂದುದಕ್ಕೆ ತಲೆಯಾಡಿಸಿದ್ದಾಯಿತು. "ಎಲ್ಲಾ ಹಾಸಿಗಿ ಮ್ಯಾಲೇ ಆಗ್ತದ. ಅವರ್ನ ನೋಡಕೊಳಿಕ್ಕೆ ನನ್ನ ಕೈಯಿಂದ ಆಗೂದಿಲ್ಲ" ಎಂದದ್ದೂ ನಿಜವೆನಿಸಿತು. ಅವ್ವನನ್ನು ನೋಡಿಕೊಳ್ಳಲು ಒಬ್ಬ ನರ್ಸು ಬಂದಳು. ಜೊತೆಗೆ "ದಿನಾ ಭಕ್ರಿ ಬಡಿಲಿಕ್ಕಾಗೂದಿಲ್ಲ. ಈಗ ಎಂಥಾ ಬಡವ್ರ ಮನ್ಯಾಗೂ ಅಡಿಗಿಯಾವ್ರನ್ನಿಟಗೋತಾರ. ನೀವು ಬಿಸಿನೆಸ್ ಮಂದಿ..." ಎಂದು ಹಂಗಿಸುತ್ತಿದ್ದಳು. ನನ್ನ ಬಿಸಿನೆಸ್ ಕಥೆ ನನಗೇ ಗೊತ್ತು. ಸುಜಾತಳಿಗೆ ಭಕ್ಕರಿ(ಜೋಳದ ರೊಟ್ಟಿ) ಎಂದರೆ ಅಲರ್ಜಿ. ತಿನ್ನಲಲ್ಲ, ಬಡಿಯಲು... ಅವ್ವ ತನ್ನ ಕೈ ಸಾಗುವವರೆಗೆ ರೇಷಿಮೆಯಂಥ ಬಿಸಿ